ಪ್ರಕಟನೆ.

ಶಿವಮೊಗ್ಗ ಡಿಸ್ಟ್ರಿಕ್ಟ್, ಶಿವಮೊಗ್ಗ-ಹೊನ್ನಾಳಿ ತಾಲ್ಲೂಕು ಹರ್ಮಘಟ್ಟ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 426-427ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಕಡೂರು ಡಿಸ್ಟ್ರಿಕ್ಟ್ ಎಡೆಹಳ್ಳಿ ಸಬ್ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ದೇವದಾನ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1907ನೆ ಇಸವಿ ಸೆಪ್ಟಂಬರು 5ನೆ ತಾರೀಖಿನ ಗೆಜೆಟ್ಟಿನ ಕನ್ನಡ 2ನೆ ಭಾಗದ 428-429ನೆ ಪೇಜುಗಳಲ್ಲಿ ವಿವರಿಸಿರುತ್ತೆ.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್.

ತಂಗಡಿ ಮತ್ತು ಕಕ್ಕೆ ಚಕ್ಕೆ.—ಇಸ್ತಿಹಾರು, ತಾರೀಖು 26ನೆ ಆಗಸ್ಟು 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಸೆಪ್ಟಂಬರ್ ತಾರೀಖು 13ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರು	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟ್.	ಜಮಾಯಿಸತಕ್ಕ ಕಾಲಗಳು	ಷರತ್ತುಗಳು.
1	ಹೆಗ್ಗಡದೇವನಕೋಟೆ	1907ನೆ ಸೆಪ್ಟಂಬರ್ 15ನೆ ತಾರೀಖು ಲಗಾಯಿತು 1908ನೆ ಜೂನ್ ಆಖ್ಯರು ವರಿಗೆ ಪ್ರತಿಯಂ	ಇನಾಂ, ಜೋಡಿ, ಕಾಯಂಗುತ್ತಾ, ಸರ್ಕಾರಿ ಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅವ್ಯತಮಹಲ್ ಕಾವಲು ಮತ್ತು ಆಕಾರಕಂಡೆ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಸ್ಟೇಟ್ ಫಾರೆಸ್ಟು ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ವಳಪಟ್ಟು ಇರುತ್ತೆ.

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಬಂದು ದರಖಾಸ್ತಿನೊಡನೆ (100) ರೂಪಾಯಿನ ಕರ್ಣಸಿ ನೋಟೆ ತೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್‌ಪೂರ್ ಮಾಡಿ ಲಿಫಾಫೀ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರಿ ಸಾಹೇಬರವರು ಒಪ್ಪರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಮೈಸೂರು ಡಿಸ್ಟ್ರಿಕ್ಟ್ ಆಫಿಸಿನಲ್ಲಿ 1907ನೆ ಸೆಪಟಂಬರ್ 14ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ಮೇಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಸೈಕಿ ಮೊದಲು ತೇವಣಿ ಮೊಬಲಗು ಕೇರಿ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ತೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನ ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

464

(9) ದರಖಾಸ್ತುದಾರರು ಮುಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಪ್ಪತ್ತಿಲ್ಲಿ ಆದಕ್ಕಾಗಿ ಡಿಪ್ಯೂಟಿ ಕಮಿಷನರ ಸಾಹೇಬರವರ ಮುಂ ಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಬಾಬಲಿಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡಿಪ್ಯೂಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮುಂಜೂರಾದ 3 ದಿವಸಗಳಲ್ಲಿ ಇಜಾರದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಸೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಕೇರಿಸಿ ಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತೀರಿಖಿನಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕೆ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಪ್ತಿಯನ್ನೆ ಮತ್ತು ರವಾನೆ ತಡಮಾಡಲ್ಪಡುತ್ತಲ್ಲದೆ ಇಜಾರೆ ಬೊಬಲಗಿನ ಬಾಕಿ ಯಾವತ್ತನ್ನು ರವಿನ್ಯೂ ಕರದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನ ರದ್ದು ಮಾಡಲಾಗುತ್ತೆ.

31ನೆ ಡಿಸಂಬರ್ 1907.

ಇತರ ಷರತ್ತುಗಳು.

(I) ಇಜಾರೆದಾರನು ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಕಿ ಕಂಟ್ರಾಕ್ಟರೇ ಆಗಲಿ ಬಂದು ವರುಷದೊಳಗಿನ ಎಳೇ ಗಿಡಗಳನ್ನ ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡೆಯುವ ಅಧ್ಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಕಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಬಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡಿಪ್ಯೂಟಿ ಕಮಿಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗ ಮಾಡಿ ಕೊಡಕೂಡದು.

(IV) ತೊಗಟೆ ತೆಗೆದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾದೆಯೂ ಇಜಾರದಾರನಿಗೆ ಕೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಕಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಕವನ್ನು ಡಿಪ್ಯೂಟಿ ಕಮಿಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕನಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಜೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಮಿಕ್ಕ ನಮೂನೆಯಲ್ಲಿ ಇಜಾರದಾರನು ಪಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಂಟಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ರೊಟೆಕ್ಟೆಡ್ ಗಳಲ್ಲಿ ಬಂಕಿ ಬುಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಲೆ ಬಾಳುವ ಫಾರೆಸ್ಟಗೆ ಆಗಲಿ ಅಥವಾ ಬಳಿಗಳಿಗೆ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1908ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡಿದು ಜಮಾವಣೀ ಮಾಡಿ ದಾಸ್ತಾನ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಪಂತ್ತುಗಳ ಪೈಕಿ ಯಾವದಾದರೂ ಬಂದು ಷರತ್ತಿಗೆ ಇಜಾರದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರೆಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತಗದುಕೊಳ್ಳಲ್ಪಡಬಹುದು. ಅಲ್ಲದೆ ಡಿಪ್ಯೂಟಿ ಕಮಿಷನರ ಸಾಹೇಬರು (100) ರೂಪಾಯಿ ವರೆವಿಗೂ ಜುರ್ಮಾನೆಯನ್ನು ಸಹಾ ಇಜಾರದಾರನಿಗೆ ವಿಧಿಸಬಹುದು.

ಎಂ. ಜಿ. ರಾಮರಾವ್,
ಫಾರ್ ಡಿಪ್ಯೂಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟ್.

ಇಸ್ತಹಾರ್.

ತಾರೀಖು 24ನೆ ಆಗಸ್ಟ್ 1907.

ಸ್ರ 1907-08ನೆ ಸಾಲಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸ್ಟೇಟ್ ಮತ್ತು ಮಾನ್ಯ ಫಾರೆಸ್ಟ್ಗಳಲ್ಲಿ ದೊರಯಬಹುದಾದ ಚಿಲ್ಲರೆ ಪಸಾಲೆ ಜಿನಸು ಜಮಾವಣೆ ಹಕ್ಕನ್ನು ಹರಾಜು ಮಾಡುತ್ತೆಂತ 1907ನೆ ಇಸವಿ ಆಗಸ್ಟ್ 29ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 419, 420ನೆ ಪುಟದಲ್ಲಿ ಪ್ರಕಟಿಸಿರುವ 24—8—07ನೆ ಇಸ್ತಹಾರಿಗೆ ಗಮನಕೊಡಬೇಕು.

ವೈ. ಶೇತಾರಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.